ಪ್ರತಿಬಿಂಬ

**PRATIBIMBA – Multidisciplinary Kannada Research Journal of IIMRD**
**ISSN: 2582-2284**
**Vol-2 Issue 3, Nov-Dec 2020, 58-65**
**©*IIMRD*, Mysuru**

IIMRD JOURNALS
**www.iimrd.com**

# ಕನ್ನಡ ಸಾಹಿತ್ಯಕ್ಕೆ ಸಾಯಿಸುತೆ, ಹೆಚ್.ಜಿ.ರಾಧಾದೇವಿ ಮತ್ತು ಉಷಾ ನವರತ್ನರಾಮ್‌ರವರ ಕೊಡುಗೆಗಳು

**ಭಾಗ್ಯ .ಎಚ್[1]**

**ಪೀಠಿಕೆ**

'ಕಾದಂಬರಿ' ಪ್ರಸ್ತುತ ಸಾಹಿತ್ಯ ಪ್ರಕಾರಗಳಲ್ಲಿ ಅತ್ಯಂತ ಪ್ರಭಾವಶಾಲಿಯೂ ಜನಪ್ರಿಯವೂ ಆಗಿದೆ. ಹತ್ತೊಂಭತ್ತನೆಯ ಶತಮಾನದಲ್ಲಿ ಇಂಗ್ಲಿಷ್ ಸಾಹಿತ್ಯದ ಪ್ರೇರಣೆಯಿಂದ ಹೊಸಗನ್ನಡದಲ್ಲಿ ಸಣ್ಣಕಥೆ, ಪ್ರಬಂಧ, ಭಾವಗೀತೆ, ಜೀವನಚರಿತ್ರೆ ಮೊದಲಾದ ಹೊಸ ಪ್ರಕಾರಗಳು ಹುಟ್ಟಿಬಂದಂತೆ 'ನಾವೆಲ್' ಎಂಬುದು ಕಾದಂಬರಿ ಎಂಬ ಹೆಸರಿನಿಂದ ಪ್ರಸಿದ್ಧವಾಯಿತು. ಕಾದಂಬರಿ ಕಳೆದ ಎರಡು ಶತಕಗಳಲ್ಲಿ ವಿಕಾಸ ಹೊಂದಿದ ಸಾಹಿತ್ಯದ ಪ್ರಭೇದ. ಕಾದಂಬರಿಯೂ ತೀರ ತಡವಾಗಿ ಹುಟ್ಟಿದರೂ ಅದು ವಿಕಾಸದ ಹಂತಗಳಲ್ಲಿ ಶೀಘ್ರವಾಗಿ ಪಡೆದ ನೆಲೆಯನ್ನು, ಅದರ ವ್ಯಾಪ್ತಿಯನ್ನು, ಜನಪ್ರಿಯತೆಯನ್ನು ಕಡೆಗಣಿಸುವಂತಿಲ್ಲ. ಕಾವ್ಯ ಮೊದಲಾದ ಹಲವಾರು ಪ್ರಭೇದಗಳನ್ನು ಬದಿಗೆ ಸರಿಸಿ ಕಾದಂಬರಿ ಸಾಹಿತ್ಯ ಕ್ಷೇತ್ರದಲ್ಲಿ ಅಲೌಕಿಕ ದಿಗ್ವಿಜಯವನ್ನು ಸಂಪಾದಿಸಿದೆ. ಕಾದಂಬರಿಗೆ ಖಚಿತವಾದ ಧ್ಯೇಯವಿದೆ. ಅವ್ಯಾಹತವಾಗಿ ಪರಿವರ್ತನೆಯನ್ನು ಹೊಂದುತ್ತಿರುವ ಜೀವನ ಪ್ರವಾಹದಲ್ಲಿ ಆಳಕ್ಕೆ ಮುಳುಗಿ ಅದಕ್ಕೊಂದು ಆಕೃತಿಯನ್ನು ಕಾದಂಬರಿ ಕೊಡುತ್ತದೆ.

ಮನುಷ್ಯನ ಜೀವನದಲ್ಲಿ ಅನಿತ್ಯತೆಯನ್ನು, ಮರಣವನ್ನು ಎದುರಿಸಬೇಕಾಗುತ್ತದೆ. ಜೀವನದಲ್ಲಿ ಪೂರ್ಣತೆಯ ಆವಿಷ್ಕಾರವಾಗುವುದು ಮೃತ್ಯುವಿನ ಬಳಿಕವೇ. ಪೂರ್ಣ ಪ್ರಜ್ಞೆಗಾಗಿ, ಶಾಶ್ವತವಾದ ಪ್ರೇಮಕ್ಕಾಗಿ ಮಾನವನ ಹಂಬಲ ಜೀವನದಲ್ಲಿ ಸ್ವಾಭಾವಿಕವಾದ ಪರಿವರ್ತನಶೀಲತೆಯ ಹಾಗೂ ವಿಪರ್ಯಸ್ತತೆಯ ಎದುರು ನಿಶ್ಶಕ್ತವಾಗುತ್ತದೆ. ಈ ಹಂಬಲದ ಪೂರ್ಣತೆ ಕಾದಂಬರಿಯಲ್ಲಿ ಆಗುತ್ತದೆ. ಮಾನವನ ಆಂತರಿಕ ಅಪೇಕ್ಷೆಗಳ ನಿರ್ದೇಶನದಂತೆ – ಕಾದಂಬರಿಯಲ್ಲಿ ನಮ್ಮ ವಾಸ್ತವ ಲೋಕದ ಪುನಾರಚನೆಯಾಗುತ್ತದೆ. ಮನುಷ್ಯನ ಅಂತರಾಳದಲ್ಲಿ ಹುದುಗಿದ ಏಕೈಕ ಅಪೇಕ್ಷೆಯೆಂದರೆ ಜೀವನದಲ್ಲಿನ ಸುಸಂಗತಿ. ಮತ ಶ್ರದ್ಧೆಯೇ ಇರಲಿ – ಕೊಲೆಯೇ ಇರಲಿ, ಪ್ರಚೋದಿತವಾಗುವುದು ಈ ಮೌಲಿಕ ಅಪೇಕ್ಷೆಯಿಂದಲೇ. ಇದೇ ಸೃಜನಶೀಲ ಸಾಹಿತ್ಯದ ರಚನೆಗೂ ಪ್ರೇರಣೆಯನ್ನು ಕೊಡುತ್ತದೆ. ಒಂದು ಅರ್ಥದಲ್ಲಿ ಮರ್ತ್ಯತೆಯನ್ನು ಮಾನವನು ಎದುರಿಸಿದ ಸಾಹಸಗಳಲ್ಲಿ ಕಾದಂಬರಿ ಅಪೂರ್ವವಾದುದು. ಕಾದಂಬರಿ ಸಾಹಿತ್ಯವನ್ನು ಬೆಳೆಸುವಲ್ಲಿ ಅವಿರತವಾಗಿ ಶ್ರಮಿಸಿ ಓದುಗರ ಮನಗಳಲ್ಲಿ ನೆಲೆಸಿರುವ

[1] *ಸಂಶೋಧಕರು, ಕನ್ನಡ ಅಧ್ಯಯನ ಸಂಸ್ಥೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು..*

ಸೃಜನಶೀಲ ಬರಹಗಾರ್ತಿಯರಾದ ಸಾಯಿಸುತೆ, ಹೆಚ್.ಜಿ.ರಾಧಾದೇವಿ ಮತ್ತು ಉಷಾ ನವರತ್ನರಾಮ್ ರವರು ಕನ್ನಡ ಸಾಹಿತ್ಯಕ್ಕೆ ನೀಡಿರುವ ಕೊಡುಗೆಗಳನ್ನು ಈ ಲೇಖನವು ಪ್ರಸ್ತುತಪಡಿಸುತ್ತದೆ.

**ಸಾಯಿಸುತೆ**

ಕಾದಂಬರಿಗಾರ್ತಿ ಸಾಯಿಸುತೆ ಕಾವ್ಯನಾಮದಲ್ಲಿ ಬರೆಯುತ್ತಿರುವ ರತ್ನ ಇವರು 1942 ಆಗಸ್ಟ್ 20 ರಂದು ಕೋಲಾರದಲ್ಲಿ ಜನ್ಮತಾಳಿದರು. ಇವರ ತಂದೆ ವೆಂಕಟಪ್ಪ ತಾಯಿ ಲಕ್ಷ್ಮಮ್ಮನವರು. ಇವರ ಪ್ರಾರಂಭಿಕ ಶಿಕ್ಷಣ ಕೋಲಾರದಲ್ಲಿ ಪೂರ್ಣಗೊಂಡಿತು. ಕಾಲೇಜಿಗೆ ಸೇರಿದರಾದರೂ ಇವರ 17ನೇ ವಯಸ್ಸಿಗೆ ಅಶ್ವತ್ಥನಾರಾಯಣ ಎಂಬುವವರೊಂದಿಗೆ ವಿವಾಹವಾಯಿತು. ಮದುವೆಯಿಂದಾಗಿ ಇವರ ಮುಂದಿನ ವ್ಯಾಸಂಗಕ್ಕೆ ತಡೆಬಿದ್ದಿತು. ಸಾಹಿತ್ಯ ಪ್ರೇಮಿಯಾಗಿದ್ದ ರತ್ನ ಅವರ ಪತಿ ಅಶ್ವತ್ಥನಾರಾಯಣರವರು ಸಾಕಷ್ಟು ಪುಸ್ತಕಗಳನ್ನು ಸಂಗ್ರಹಿಸಿದ್ದರು. ಅವುಗಳನ್ನೆಲ್ಲಾ ಓದುತ್ತಿದ್ದ ಹಾಗೇ ರತ್ನ ಅವರಲ್ಲಿ ಸಾಹಿತ್ಯದತ್ತ ಒಲವು ಮೂಡತೊಡಗಿತು. ಸ್ವಯಂ ಶ್ರದ್ಧೆಯಿಂದ ಹಿಂದಿ, ಇಂಗ್ಲಿಷ್, ಸಂಸ್ಕೃತ ಭಾಷೆಯನ್ನು ಕಲಿತುಕೊಂಡರು. ಕಾರಂತರು, ಭೈರಪ್ಪ, ಅ.ನ.ಕೃ., ತ.ರಾ.ಸು, ಕಾದಂಬರಿಗಳು ಮಾರುಕಟ್ಟೆಗೆ ಬರುತ್ತಿದ್ದಂತೆ ಕೊಂಡು ಓದುವ ಹವ್ಯಾಸವನ್ನು ಬೆಳೆಸಿಕೊಂಡರು. ಹೀಗೆಯೇ ಓದುತ್ತಾ ಓದುತ್ತಾ ಬರೆಯಬೇಕೆಂಬ ಹಂಬಲ ಹಾಗೂ ತುಡಿತವೂ ಸಹ ರತ್ನ ಅವರಲ್ಲಿ ಮೂಡಿಬಂತು. ರತ್ನ ಅವರ ಬರವಣಿಗೆಯನ್ನು ಪ್ರೋತ್ಸಾಹಿಸಿದ ಅವರ ಪತಿ ಅಶ್ವತ್ಥನಾರಾಯಣರವರ ಬೆಂಬಲದಿಂದಾಗಿ ಅವರ ಬರಹಗಳು ಕೃತಿರೂಪವನ್ನು ಪಡೆದುಕೊಂಡವು. ಹಾಗಾಗಿ ಒಬ್ಬ ಸೃಜನಶೀಲ ಕಾದಂಬರಿಗಾರ್ತಿಯಾಗಿ ರೂಪಗೊಳ್ಳುವ ಮೂಲಕ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅದರಲ್ಲೂ ವಿಶೇಷವಾಗಿ ಕಾದಂಬರಿ ಸಾಹಿತ್ಯ ಪ್ರಕಾರಕ್ಕೆ ತಮ್ಮದೇ ಆದ ಕೊಡುಗೆ ನೀಡಲು ಸಾಧ್ಯವಾಯಿತು. ಹಾಗಾಗಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ರತ್ನ ಅವರು ಸಾಯಿಸುತೆಯಾಗಿ ಜನಮಾನಸದಲ್ಲಿ ಉಳಿಯುವಂತೆ ತಮ್ಮ ಬರಹಗಳಲ್ಲಿ ತನ್ಮಯರಾದರು.

ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಂಡಿರುವ ಸಾಯಿಸುತೆಯವರು, ಪ್ರಾರಂಭದಲ್ಲಿ ಬಹುತೇಕ ಬರಹಗಾರರಂತೆ ಪದ್ಯಗಳನ್ನು ಬರೆದವರು. ಆದರೆ, ಅವರ ಒಲವು ಕಾದಂಬರಿ ಲೋಕದ ಕಡೆ ಜಾರಿತು. 1970 ರಲ್ಲಿ ಸಾಯಿಸುತೆ ಅವರ ಮೊದಲ ಕಾದಂಬರಿ 'ಮಿಂಚು' ಬರೆಯಲ್ಪಟ್ಟಿತು. ಆದರೂ ಬರೆದ ಕಾದಂಬರಿಯನ್ನು ಕೆಲವು ವರ್ಷಗಳ ಕಾಲ ಹಾಗೇ ಇಟ್ಟುಕೊಂಡಿದ್ದರು. 'ಪ್ರಜಾಮತ'ದಲ್ಲಿ ಇವರ 'ವಿವಾಹ ಬಂಧನ' ಧಾರವಾಹಿಯಾಗಿ ಪ್ರಕಟವಾಯಿತು. ರತ್ನ ಆಗಿದ್ದವರು ಸಾಯಿಬಾಬಾ ಅವರ ಮೇಲಿನ ಭಕ್ತಿಯಿಂದ ತಮ್ಮನ್ನು 'ಸಾಯಿಸುತೆ'ಯಾಗಿಸಿಕೊಂಡರು. ಸಾಯಿಸುತೆಯವರು ಇದುವರೆಗೆ ಬರೆದಿರುವ ಕಾದಂಬರಿಗಳ ಸಂಖ್ಯೆ ಸುಮಾರು 140ರ ಸಮೀಪದ್ದು. ಅವುಗಳಲ್ಲಿ ಅನುಬಂಧದ ಕಾರಂಜಿ, ಅಭಿಲಾಷ, ಅಮೃತ ಸಿಂಧು, ಅರುಣ ಕಿರಣ, ಆಡಿಸಿದಳು ಜಗದೋದ್ಧಾರನಾ, ಆರಾಧಿತೆ, ಇಂದ್ರ ಧನುಸ್ಸು, ಇಬ್ಬನಿ ಕರಗಿತು. ಕರಗಿದ ಕಾರ್ಮೋಡ, ಕಲ್ಯಾಣ ರೇಖೆ, ಕಾರ್ತೀಕದ ಸಂಜೆ, ಕೋಗಿಲೆ ಹಾಡಿತು, ಗಂಧರ್ವ ಗಿರಿ, ಗಿರಿಧರ, ಚಿರ ಬಾಂಧವ್ಯ, ಚೈತ್ರದ ಕೋಗಿಲೆ, ಜನನಿ ಜನ್ಮಭೂಮಿ, ಜೀವನ ಸಂಧ್ಯ, ಡಾ. ವಸುಧಾ, ದಂತದ ಗೊಂಬೆ, ದೀಪಾಂಕುರ, ಧವಳ ನಕ್ಷತ್ರ, ನನ್ನ ಭಾವ ನಿನ್ನ ರಾಗ, ನನ್ನೆದೆಯ ಹಾಡು, ನಮ್ರತಾ, ನಲಿದ ಸಿಂಧೂರ, ನವಚೈತ್ರ, ನಾಟ್ಯ ಸುಧಾ, ನಿಶಾಂತ್, ನಿಶೆಯಿಂದ ಉಷೆಗೆ, ನೂರು ನೆನಪು,

ಪಂಚವಟಿ, ಪಸರಿಸಿದ ಶ್ರೀಗಂಧ, ಪಾಂಚಜನ್ಯ, ಪುಷ್ಕರಿಣಿ, ಪೂರ್ಣೋದಯ, ಪ್ರಿಯಸಖೀ, ಪ್ರೀತಿಯ ಹೂಬನ, ಪ್ರೇಮ ಸಾಫಲ್ಯ, ಬಣ್ಣದ ಚುಂಬಕ, ಬಾಂದಳದ ನಕ್ಷತ್ರ, ಬಾಡದ ಹೂ, ಬಾನು ಮಿನುಗಿತು, ಬಿರಿದ ನೈದಿಲೆ, ಬಿಳಿ ಮೋಡಗಳು, ಬೆಳದಿಂಗಳ ಚೆಲುವೆ, ಬೆಳ್ಳಿ ದೋಣಿ, ಭಾವ ಸರೋವರ, ಮಂಗಳ ದೀಪ, ಮಂಜಿನಲ್ಲಿ ಮಿಂದ ಪುಷ್ಪ, ಮಂದಾರ ಕುಸುಮ, ಮತ್ತೊಂದು ಬಾಡದ ಹೂ, ಮಧುರ ಆರಾಧನ, ಮಧುರ ಗಾನ, ಮಮತೆಯ ಸಂಕೋಲೆ, ಮಾಗಿಯ ಮಂಜು, ಮಾನಸ ವೀಣಾ, ಮಿಂಚು, ಮಿಡಿದ ಶೃತಿ, ಮುಂಜಾನೆಯ ಮುಂಬೆಳಕು, ಮುಗಿಲ ತಾರೆ, ಮೂಡಿ ಬಂದ ಶಶಿ, ಮೇಘವರ್ಷಿಣಿ, ಮೌನ ಆಲಾಪನ, ರಜತಾದ್ರಿಯ ಕನಸು, ರಾಗ ಬೃಂದಾವನ, ರಾಧ ಮೋಹನಾ, ವರ್ಷ ಬಿಂದು, ವಸಂತದ ಚಿಗುರು, ವಸುಂಧರ, ವಿಧಿವಂಚಿತೆ, ವಿವಾಹ ಬಂಧನ, ಶರದೃತುವಿನ ಚಂದ್ರ, ಶುಭಮಿಲನ, ಶ್ಯಾನುಭೋಗರ ಮಗಳು, ಶ್ರಾವಣ ಪೂರ್ಣಿಮ, ಶ್ರೀರಸ್ತು ಶುಭಮಸ್ತು, ಶ್ವೇತ ಗುಲಾಬಿ, ಸಂಧ್ಯಾ ಗಗನ, ಸಪ್ತಪದಿ, ಸಪ್ತರಂಜನಿ, ಸಮ್ಮಿಲನ, ಸುಪ್ರಭಾತದ ಹೊಂಗನಸು, ಸುಭಾಷಿಣಿ, ಸುಮಧುರ ಭಾರತಿ, ಸುಮಧುರ ಸಂಗಮ, ಸೊಬಗಿನ ಪ್ರಿಯದರ್ಶಿನಿ, ಸ್ನೇಹ ಮಾಧುರಿ, ಸ್ವಪ್ನ ಸಂಭ್ರಮ, ಸ್ವರ್ಗದ ಹೂ, ಸ್ವರ್ಣ ಮಂದಿರ, ಹಂಸ ಪಲ್ಲಕಿ, ಹಿಮಗಿರಿ ನವಿಲು, ಹೃದಯ ರಾಗ, ಹೇಮ ವಿಹಾರಿ, ಹೇಮಂತದ ಸೊಗಸು, ಹೊಂಬೆಳಕು ಇತ್ಯಾದಿ.

ಸಾಯಿಸುತೆಯವರ ಕಾದಂಬರಿ ದೊಡ್ಡ ಪ್ರಮಾಣದಲ್ಲಿ ಬೆಳದಿದ್ದು, ಸಣ್ಣಕಥೆಗಳೂ ಕೂಡ ಹಲವಾರು ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಅವರ ಶಿಶುಸಾಹಿತ್ಯ ಕೂಡ 'ಪಾಪಚ್ಚಿ' ಮುಂತಾದ ಶಿಶುಸಾಹಿತ್ಯ ಪತ್ರಿಕೆಗಳನ್ನು ಅಲಂಕರಿಸಿವೆ. ಸಾಕ್ಷರತಾ ಆಂದೋಲನದ ಕಾರ್ಯಕ್ರಮದಡಿ ವಯಸ್ಕರ ಶಿಕ್ಷಣಕ್ಕಾಗಿ ಹಲವಾರು ಪಠ್ಯ ಪುಸ್ತಕಗಳನ್ನು ಅವರು ರೂಪಿಸಿದ್ದಾರೆ. ಬಾನುಲಿಗಾಗಿ ಹಲವು ನಾಟಕಗಳನ್ನು ಬರೆದಿದ್ದಾರೆ. ಹೀಗೆ ಅವರ ಸಾಹಿತ್ಯ ಕೃಷಿಯನ್ನು ಗಮನಿಸಿರುವ ಸರ್ಕಾರಗಳು ಅವರನ್ನು ಗುರುತಿಸಿ ರಾಜ್ಯೋತ್ಸವ ಸಂದರ್ಭದಲ್ಲಿ ಸನ್ಮಾನ, ದಾನಚಿಂತಾಮಣಿ ಅತ್ತಿಮಬ್ಬೆ ಸ್ಮಾರಕ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿಯ ಫಊಔ ಖಖ ಫಊಔನಲ್ಲಿ ಸೇರ್ಪಡೆ. ಬೆಳಗಾವಿ ಸಾಹಿತ್ಯ ಸಮ್ಮೇಳನದಲ್ಲಿ ಕನ್ನಡಶ್ರೀ ಪ್ರಶಸ್ತಿ, ತುಮಕೂರು ಜಿಲ್ಲಾ ಲೇಖಕಿಯರ ಸಂಘದಿಂದ ಸಾಹಿತ್ಯ ಸಂಪನ್ನೆ ಪ್ರಶಸ್ತಿ. 2018ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ವರ್ಷದ ಗೌರವ ಪ್ರಶಸ್ತಿ ನೀಡಿ ಗೌರವಿಸಿರುವುದನ್ನು ಗಮನಿಸಬಹುದು.

**ಹೆಚ್.ಜಿ. ರಾಧಾದೇವಿ**

ಸಾಹಿತ್ಯ ಲೋಕದಲ್ಲಿ ತಮ್ಮದೇ ಆದ ಚಿಂತನೆಗಳಲ್ಲಿ ವಿಹರಿಸುತ್ತ, ರಮ್ಯ ಪಾತ್ರಗಳನ್ನು ಸೃಷ್ಟಿಸುತ್ತ, ಸಾಹಿತ್ಯ ಮತ್ತು ಕಾದಂಬರಿ ಓದುಗರನ್ನು ಕನಸಿನ ಲೋಕಕ್ಕೆ ಕೊಂಡೊಯ್ಯುವಂತಹ ತಂತ್ರ ಮತ್ತು ಮಾಂತ್ರಿಕ ಪಾತ್ರಗಳನ್ನು ಸೃಷ್ಟಿಸುವ ಮೂಲಕ ಬರವಣಿಗೆಯಲ್ಲಿ ತೊಡಗಿಸಿಕೊಂಡಿದ್ದ ರಾಧಾಮಣಿಯವರು ಹುಟ್ಟಿದ್ದು ಕೋಲಾರ ಜಿಲ್ಲೆಯ ಶಿಡ್ಲಘಟ್ಟದಲ್ಲಿ. ತಂದೆ ಸಂಪ್ರದಾಯಸ್ಥ ಕುಟುಂಬದ ಗೋಪಿನಾಥಾಚಾರ್‌ರವರು ಪ್ರಾಥಮಿಕ ಶಾಲಾ ಶಿಕ್ಷಕರು. ತಾಯಿ ಸರಸ್ವತಮ್ಮ. ತಂದೆ ಗೋಪಿನಾಥಾಚಾರ್ಯರಿಗೆ ಆಗಾಗ್ಗೆ ವರ್ಗವಾಗುತ್ತಿದ್ದುದರಿಂದ ಮಾಲೂರು, ಶ್ರೀನಿವಾಸಪುರ, ಚಿಕ್ಕಬಳ್ಳಾಪುರ, ಚನ್ನಪಟ್ಟಣ, ಗೌರಿಬಿದನೂರು ಮುಂತಾದ ಕಡೆಗಳಲ್ಲಿ ಪ್ರಾರಂಭಿಕ ಶಿಕ್ಷಣ. ಕೋಲಾರದಲ್ಲಿ

ಸರ್ಕಾರಿ ಪ್ರೌಢಶಾಲೆಯಲ್ಲಿ ಎಸ್.ಎಸ್.ಎಲ್.ಸಿ.ಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಐವರು ಹುಡುಗಿಯರಲ್ಲಿ ರಾಧಾಮಣಿಯವರೂ ಒಬ್ಬರು. ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗಿನಿಂದಲೂ ಕಾದಂಬರಿ ಓದುವ ಹವ್ಯಾಸ ಬೆಳೆಸಿಕೊಂಡಿದ್ದರು. ಅ.ನ.ಕೃ, ತ್ರಿವೇಣಿ ಮುಂತಾದವರ ಕಾದಂಬರಿಗಳು ಇವರ ತರಗತಿಯ ನೋಟ್‌ಪುಸ್ತಕಗಳೊಳಗೆ ಸೇರಿಕೊಳ್ಳುತ್ತಿದ್ದವು. ಕಾದಂಬರಿಗಳ ಓದಿನೊಂದಿಗೆ ತರಗತಿಯ ಪಾಠ ಪ್ರವಚನಗಳಲ್ಲಿಯೂ ಮುಂಚೂಣಿಯಲ್ಲಿದ್ದರು. ರಜೆಯ ದಿನಗಳಲ್ಲಿ ಕುಮಾರವ್ಯಾಸನ ಭಾರತಕಥಾಮಂಜರಿಯ ಓದು ಬಹಳ ಅಚ್ಚುಮೆಚ್ಚಿನ ಹವ್ಯಾಸವಾಗಿತ್ತು. ಹಲವಾರು ಪ್ರಸಂಗಗಳನ್ನು ಕಂಠಸ್ಥವಾಗಿಸಿಕೊಂಡಿದ್ದರು. ಇವುಗಳ ಪ್ರೇರಣೆ ಮತ್ತು ಪ್ರಭಾವವೇ ಮುಂದೆ ಕಾದಂಬರಿ ಪ್ರಪಂಚಕ್ಕೆ ಕೊಂಡೊಯ್ಯುವ ಮೂಲ ಸ್ತ್ರೋತ್ರವಾಗಿ ಕಾದಂಬರಿಗಳ ರಚನೆಯಲ್ಲಿ ಬಹುಮುಖ್ಯ ಪಾತ್ರವಹಿಸಿತು.

ಬಾಲ್ಯದಿಂದಲೂ ರೂಢಿಸಿಕೊಂಡಿದ್ದ ವಿಸ್ತೃತ ಓದು ಬರವಣಿಗೆಯನ್ನು ಪ್ರಾರಂಭಿಸಲು ಉತ್ತೇಜನ ನೀಡಿತು. 'ರಾಧಾದೇವಿ' ಎಂಬ ಕಾವ್ಯನಾಮದಿಂದ ಸಣ್ಣ ಕಥೆಗಳು, ವಿವಿಧ ವಿಷಯಗಳಿಗೆ ಸಂಬಂಧಿಸಿದ ಲೇಖನಗಳನ್ನು ಪತ್ರಿಕೆಗಳಿಗೆ ಬರೆಯತೊಡಗಿದರು. ದುಡಿಯುವ ಮಹಿಳೆಯರ ಸಮಸ್ಯೆಗಳ ಬಗ್ಗೆ ಹಲವಾರು ಲೇಖನಗಳನ್ನು ಬರೆದರು. ಇವರ ಮೊದಲ ಪ್ರಕಟಿತ ಕಾದಂಬರಿ 'ಸುವರ್ಣ ಸೇತುವೆ'. ಇದಕ್ಕೂ ಮುಂಚೆ ಒಂಬತ್ತು ಕಾದಂಬರಿಗಳನ್ನು ಬರೆದಿದ್ದರೂ ಅವುಗಳಾವುದಕ್ಕೂ ಪ್ರಕಟಣೆಯ ಭಾಗ್ಯ ದೊರೆತಿರಲಿಲ್ಲ. ಪ್ರಜಾಮತ ಪತ್ರಿಕೆಯಲ್ಲಿ ಧಾರವಾಹಿಯಾಗಿ ಸುವರ್ಣ ಸೇತುವೆಯು ಪ್ರಕಟವಾಗುತ್ತಿದ್ದಂತೆ ಗಳಿಸಿದ ಜನಪ್ರಿಯತೆಯಿಂದ, ಹಿಂದೆ ಬರೆದಿದ್ದ ಇತರೆ ಕಾದಂಬರಿಗಳಿಗೂ ಪ್ರಕಟಣೆಯಾಗುವ ಭಾಗ್ಯ ಕೂಡಿಬಂದಿತು. ಬೆಂಗಳೂರಿನ ಗೀತಾ ಏಜೆನ್ಸಿಸ್‌ನ ಪ್ರಕಾಶಕರಿಂದಾಗಿ ಪುಸ್ತಕ ರೂಪವನ್ನು ಪಡೆಯತೊಡಗಿದವು. ಆನಂತರ ಇದೇ ಪ್ರಕಾಶಕರಿಂದ ಎಂಬತ್ತೆಂಟು ಕಾದಂಬರಿಗಳನ್ನು ಪ್ರಕಟಿಸಿದ್ದಲ್ಲದೆ, ಮೊದಲ ಹನ್ನೆರಡು ಕಾದಂಬರಿಗಳು ಮೂರಕ್ಕೂ ಹೆಚ್ಚು ಮುದ್ರಣವನ್ನು ಕಂಡಿವೆ.

ಹೀಗೆ ನಿರಂತರ ಬೇಡಿಕೆಯನ್ನು ಹೊಂದಿದ್ದ ಕಾದಂಬರಿಗಾರ್ತಿ ರಾಧಾದೇವಿಯವರು ಸುಮಾರು 170 ಕಾದಂಬರಿಗಳನ್ನು ರಚಿಸಿದ್ದಾರೆ. ಅವುಗಳನ್ನು ವಸಂತ, ಕೀರ್ತಿ, ಗೀತಾಂಜಲಿ, ಹೇಮಂತ ಸಾಹಿತ್ಯ, ಪ್ರಿಯದರ್ಶಿನಿ, ಹಂಸಧ್ವನಿ ಪ್ರಕಾಶನ ಮತ್ತು ದಿವ್ಯ ಚಂದ್ರ ಪ್ರಕಾಶನದವರು ಪ್ರಕಟಿಸಿದ್ದಾರೆ. ರಾಧಾದೇವಿಯವರ ಮೊದಲ ಕಾದಂಬರಿ ಸುವರ್ಣ ಸೇತುವೆ ಕಾದಂಬರಿಯು ಧಾರವಾಹಿಯಾಗಿ ಪ್ರಕಟಗೊಂಡ ನಂತರ, ಮೊದಲ ಕಂತು ಪ್ರಕಟವಾಗುತ್ತಿದ್ದಂತೆ ಪ್ರತಿಕ್ರಿಯಿಸಿದ ಅಭಿಮಾನಿಯೊಬ್ಬರ ಪ್ರತಿಕ್ರಿಯೆ ಉತ್ತರಿಸುತ್ತಾ ಅದು ಸ್ನೇಹವಾಗಿ, ಸ್ನೇಹ ಪ್ರೀತಿ–ಪ್ರೇಮದಲ್ಲಿ ಮುಂದುವರಿದು ಪತಿಯಾಗಿ ಪ್ರವೇಶಮಾಡಿದ ಸ್ವಾರಸ್ಯಕರ ಘಟನೆ ಹಾಗೂ ಅಪರೂಪದ ಸಂದರ್ಭವನ್ನು ಇವರ ನಿಜಜೀವನದಲ್ಲಿ ಕಾಣಬಹುದು. ಮುಂದೆ ಇದೇ ಕಾದಂಬರಿಯು ಅದೇ ಹೆಸರಿನಲ್ಲಿ 1980 ರಲ್ಲಿ ಸಿನಮಾವಾಗಿ ವಿಷ್ಣುವರ್ಧನ್, ಆರತಿಯವರ ಅಭಿನಯದಲ್ಲಿ ತೆರೆಕಂಡು ಜನಮನ್ನಣೆಯನ್ನು ಗಳಿಸಿಕೊಟ್ಟಿದೆ. ಮತ್ತೊಂದು ಕಾದಂಬರಿ ಅನುರಾಗ ಅರಳಿತು ಇದೇ ಹೆಸರಿನಲ್ಲಿ ಕನ್ನಡ ಚಲನಚಿತ್ರ ರಂಗದಲ್ಲಿ ಮೇರುನಟರಾದ ಡಾ. ರಾಜ್‌ಕುಮಾರ್ ಮತ್ತು ಮಾಧವಿ, ಗೀತಾ ಮುಂತಾದವರ ಅಭಿನಯದಲ್ಲಿ ಜನಪ್ರಿಯತೆಗಳಿಸಿದ ಚಲನಚಿತ್ರವಾಯಿತು. ಆದರೂ ರಾಧಾದೇವಿಯವರ ಮೊದಲ ಕಾದಂಬರಿಯು ಬದುಕು ಹಾಗೂ ಸಾಹಿತ್ಯ

ಕ್ಷೇತ್ರದಲ್ಲಿ ತಮ್ಮ ದಿಕ್ಕನ್ನೇ ಬದಲಿಸಿ, ಬಾಳಸಂಗಾತಿ, ಬರವಣಿಗೆಗೆ ಮತ್ತಷ್ಟು ಹಿರಿಮೆಗರಿಮೆಯನ್ನು ತಂದುಕೊಟ್ಟ ಕೀರ್ತಿಗೆ ಪಾತ್ರವಾಗಿದೆ.

ರಾಧಾದೇವಿಯವರು ಎಂಟು ಪೌರಾಣಿಕ ಕಾದಂಬರಿಗಳನ್ನೂ ಬರೆದಿದ್ದು, ಅವುಗಳಲ್ಲಿ ಅಹಲ್ಯಾ, ದ್ರೌಪದಿ, ಸೀತಾ, ತಾರಾ, ಮಂಡೋದರಿ ಕಾದಂಬರಿಗಳನ್ನು ಮಂಜುವಾಣಿ ಪತ್ರಿಕೆಯವರು ಪ್ರಕಟಿಸಿದ್ದಲ್ಲದೆ, ರಾಧೆಗೊಲಿದ ಕೃಷ್ಣ ಮತ್ತು ಸತ್ಯಭಾಮಾವೃತ ಶ್ರೀಕೃಷ್ಣ ಕಾದಂಬರಿಯನ್ನು ಪ್ರಕಟಿಸಿದರು. ಶ್ರೀನಿವಾಸ ಕಲ್ಯಾಣ ಕಾದಂಬರಿಯನ್ನು ತರಂಗ ವಾರ ಪತ್ರಿಕೆಯವರು ಪ್ರಕಟಿಸಿದ್ದಾರೆ. ಅಲ್ಲದೇ, ಮನಸ್ಸಿನ ಕಣ್ಣು ಎಂಬ ಪತ್ತೇದಾರಿ ಕಾದಂಬರಿ ಮತ್ತು ಬೆಳಕು ಎಂಬ ಧಾರ್ಮಿಕ ಕಾದಂಬರಿಯನ್ನು ಸಹ ರಚಿಸಿದ್ದಾರೆ.

ರಾಧಾದೇವಿಯವರ ಐವತ್ತನೆಯ ಕಾದಂಬರಿ 'ಅಂಬರ ಚುಂಬಿತೆ' ತರಂಗ ವಾರ ಪತ್ರಿಕೆಯಲ್ಲೂ ನೂರನೆಯ ಕಾದಂಬರಿ 'ಬಂಗಾರದ ಕಿಡಿ' ಹಾಗೂ ನೂರ ಐವತ್ತನೆಯ ಕಾದಂಬರಿ 'ಹಂಸ ಉಗುಳಿದ ಹಾರ' ಇವು ಕರ್ಮವೀರ ವಾರ ಪತ್ರಿಕೆಯಲ್ಲಿಯೂ ಧಾರಾವಾಹಿಯಾಗಿ ಪ್ರಕಟಗೊಂಡವು. ಹಿಂದಿ ಭಾಷೆಗೂ ಇವರ ಎರಡು ಕಾದಂಬರಿಗಳಾದ 'ಬೆಳಕು' ಮತ್ತು 'ಸುಖದ ಕನಸು' ಕಾದಂಬರಿಯು 'ಸುಂದರ ಸಪ್ನೇ' ಎಂಬ ಹೆಸರಿನಿಂದ ಪ್ರಕಟವಾಗಿವೆ. ಇವರ 'ಭ್ರಮರ ಬಂಧನ' ಕಾದಂಬರಿಗೆ ಅ.ನ.ಕೃ., ಸ್ಮಾರಕ ಕಾದಂಬರಿ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದಿದ್ದರೆ, 'ಮಿಂಚಿನಿಂದಿಳಿದ ಮೋಹನಾಂಗಿ' ಜಾನಪದ ಕಥಾಸಂಕಲನಕ್ಕೆ ಧಾರವಾಡದ ವಿದ್ಯಾವರ್ಧಕ ಸಂಘದ ಮಾತೋಶ್ರೀ ರತ್ನಮ್ಮ ಹೆಗ್ಗಡೆ ಪ್ರಶಸ್ತಿ; ಅತ್ತಿಮಬ್ಬೆ ಪ್ರತಿಷ್ಠಾನ ಪ್ರಶಸ್ತಿ, ವಿಶ್ವೇಶ್ವರಯ್ಯ ಸ್ಮಾರಕ ಪ್ರಶಸ್ತಿ, ಅನುರಾಗ ಅರಳಿತು ಚಿತ್ರ ಕಥೆಗಾಗಿ ಚಿತ್ರ ರಸಿಕರ ಸಂಘದಿಂದ ಅತ್ಯುತ್ತಮ ಕಥಾ ಪ್ರಶಸ್ತಿ ಮುಂತಾದ ಪ್ರಶಸ್ತಿಗಳಿಗೆ ಪಾತ್ರರಾಗಿದ್ದ ರಾಧಾದೇವಿಯವರು ಸಾಹಿತ್ಯ, ಕಾದಂಬರಿ ಮತ್ತು ಇಹ ಲೋಕದಿಂದ ನಮ್ಮನ್ನು 2006ರ ನವೆಂಬರ್ 9 ರಂದು ಬಿಟ್ಟುಹೋಗಿದ್ದಾರೆ.

**ಉಷಾ ನವರತ್ನರಾಮ್**

ಉಷಾ ನವರತ್ನರಾಮ್ ಕನ್ನಡದ ಜನಪ್ರಿಯ ಲೇಖಕಿ, ಸಂಪಾದಕಿ, ಅಂಕಣಗಾರ್ತಿ, ಅಧ್ಯಾಪಕಿಯಾಗಿ ಹೆಸರು ಗಳಿಸಿದ ಮತ್ತೋರ್ವ ಜನಪ್ರಿಯ ಬರಹಗಾರ್ತಿ. ಇವರ ಜನನವು 1939 ನವೆಂಬರ್ 23 ರಂದು ಬೆಂಗಳೂರಿನಲ್ಲಿ ಆಯಿತು. ಇವರ ತಂದೆ ಎಂ.ವಿ. ಸುಬ್ಬರಾವ್, ತಾಯಿ ಶಾಂತಮ್ಮ. ಪ್ರಾರಂಭಿಕ ಶಿಕ್ಷಣ ಶಿವಮೊಗ್ಗದ ಮೇರಿ ಇಮ್ಯಾಕುಲೇಟ್ ಕಾನ್ವೆಂಟ್ ಹಾಗೂ ಬೆಂಗಳೂರಿನ ಮಹಿಳಾ ಸೇವಾ ಸಮಾಜ. ಮೌಂಟ್ ಕಾರ್ಮಲ್ ಕಾಲೇಜಿನಿಂದ ಇಂಗ್ಲಿಷ್ ಸಾಹಿತ್ಯ ಹಾಗೂ ಇತಿಹಾಸದಲ್ಲಿ ಪಡೆದ ಬಿ.ಎ. ಪದವಿ ಹಾಗೂ ಪತ್ರಿಕೋದ್ಯಮದಲ್ಲಿ ಡಿಪ್ಲೊಮಾ ಪದವಿ ಪಡೆದುಕೊಂಡಿದ್ದಾರೆ. ಹುಟ್ಟಿದ ಹಾಗೂ ಸೇರಿದ ಎರಡೂ ಮನೆಯಲ್ಲಿ ಸದಾ ಸಾಹಿತ್ಯದ ವಾತಾವರಣ ಉಷಾ ನವರತ್ನರಾಮ್ ಅವರನ್ನು ಸಾಹಿತ್ಯಲೋಕದಲ್ಲಿ ಪ್ರಜ್ವಲಿಸುವಂತೆ ಮಾಡಿತು. ವಿದ್ಯಾರ್ಥಿನಿಯಾಗಿದ್ದಾಗಲೇ ಬರೆದ ಲೇಖನಗಳು ಮೈಸಿಂಡಿಯಾದಲ್ಲಿ ಪ್ರಕಟಿತವಾಗಿದ್ದವು. ಇಂಗ್ಲಿಷ್ ಮತ್ತು

ಕನ್ನಡ ಪತ್ರಿಕೆಗಳ ಅಂಕಣಗಾರ್ತಿ, ಗೆಳತಿ ಮತ್ತು ಉಷಾ ಪತ್ರಿಕೆಗಳ ಸಂಪಾದಕಿಯಾಗಿ ಕೆಲಕಾಲ ದುಡಿದಿದ್ದಾರೆ. ಮಹಿಳಾ ಸೇವಾ ಸಮಾಜದಲ್ಲಿ ಅಧ್ಯಾಪಕಿಯಾಗಿ 27 ವರ್ಷ ಸೇವೆ ಸಲ್ಲಿಸಿದ್ದಾರೆ.

ಕಥೆ, ಕಾದಂಬರಿ ಮತ್ತು ಅಂಕಣ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿ ಅನೇಕ ಓದುಗ ಮನಸ್ಸುಗಳನ್ನು ಗೆದ್ದಿದ್ದಾರೆ. ಅಲ್ಲದೇ, ಆಕಾಶವಾಣಿಯಲ್ಲಿ ಮಕ್ಕಳಿಗಾಗಿ ಹಲವಾರು ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ. ಉಷಾರವರು 1969 ಫೆಬ್ರುವರಿ 3ರಂದು ಖ್ಯಾತ ಸಾಹಿತಿ ನವರತ್ನರಾಮ್ ಅವರನ್ನು ವಿವಾಹವಾದರು. ನವರತ್ನರಾಂ ಕನ್ನಡ ಸಾಹಿತ್ಯದಲ್ಲಿ, ನಗೆ ಬರಹಗಳ ಮಾಂತ್ರಿಕ, ನಗೆ ಬರಹದ ಮೂಲಕ ಜೀವನ ದರ್ಶನವನ್ನು, ನವರತ್ನರಾಂ ಅವರ ಲೇಖನಗಳಲ್ಲಿ ನೋಡಬಹುದು. ಲಘುವಾದ ಬರಹಗಳಲ್ಲಿ ಗಾಂಭೀರ್ಯತೆ ಕಾಣಬಹುದು. ಇವರನ್ನು ವರಿಸಿದ ಉಷಾ ಮುಂದೆ ಉಷಾ ನವರತ್ನರಾಮ್ ಎಂದೇ ಪ್ರಸಿದ್ಧಿಯಾದರು. ಅವರ ಪತಿಯಿಂದಲೂ ಕನ್ನಡದಲ್ಲಿ ಬರೆಯಲು ಉಷಾಗೆ ಪ್ರೋತ್ಸಾಹ ದೊರೆಯಿತು. ಈ ದಂಪತಿಗಳಿಗೆ ಆರತಿ, ಅಂಜಲಿ ಮತ್ತು ಆಶ್ರಯಾ ಎಂಬ ಮೂವರು ಮಕ್ಕಳಿದ್ದಾರೆ.

ಉಷಾ ನವರತ್ನರಾಮ್ ಅವರ ಅನೇಕ ಕಾದಂಬರಿಗಳು ಸುಧಾ, ಪ್ರಜಾಮತ, ಕರ್ಮವೀರ, ತರಂಗ, ಮಂಗಳ ಮೊದಲಾದ ಕನ್ನಡದ ವಿವಿಧ ವಾರಪತ್ರಿಕೆಗಳಲ್ಲಿ ಹಾಗೂ ಮಲ್ಲಿಗೆ, ತುಷಾರ, ವನಿತಾ, ಪ್ರಿಯಾಂಕ, ರಾಗಸಂಗಮ, ಹಂಸರಾಗ ಮೊದಲಾದ ಮಾಸಪತ್ರಿಕೆಗಳಲ್ಲಿ ಧಾರಾವಾಹಿಯಾಗಿ ಪ್ರಕಟವಾಗುತ್ತಿದ್ದವು. ಅಭಿನಯ, ಕತೆ ಹೇಳುವೆ ಮತ್ತು ಕೇಳು ನನ್ನ ಕಥೆಯಾ ಎಂಬ ಕಥಾಸಂಕಲನ, ಅಭಿನಯ, ಇರುಳು ಕಂಡ ಬಾವಿ, ಉಪಕಾರ, ಉಯಿಲು, ಎಂದೆಂದಿಗೂ ನಿನ್ನವನೆ, ಎಲ್ಲಾದರು ಸುಖವಾಗಿರು, ಒಂದು ದಿನ ರಾತ್ರಿಯಲಿ, ಒಡಕು ದೋಣಿ, ಒಳಗೆ ಬಾ ಅತಿಥಿ, ಕರೆಗಂಟೆ, ಕರೆದರೆ ಬರೆಬಾರದೆ, ಕಿಚ್ಚು, ಕೃಷ್ಣಾ ನೀ ಬೇಗನೆ ಬಾರೋ, ಕ್ಷಮೆಯಿರಲಿ ತಂದೆ, ಗುಪ್ತಗಾಮಿನಿ (ಹೊರನೋಟ, ಹಂಸರಾಗ), ಗೂಡು ಬಿಟ್ಟ ಹಕ್ಕಿ, ದಾರಿ ಯಾವುದಯ್ಯಾ?, ನನ್ನ ಮುದ್ದು ಮರಿ, ನಾನು ವೀಣೆ ನೀನೇ ತಂತಿ, ನಾಳೆಯು ಬರಲಿ, ನಿನ್ನೊಲುಮೆ ನನಗಿರಲಿ, ನೀ ಮುಡಿದಾ ಮಲ್ಲಿಗೆ, ನೀನೆ ಅನಾಥ ಬಂಧು, ನೆನ್ನೆ ನೆನ್ನೆಗೆ! ನಾಳೆ ನಾಳೆಗೆ!, ಪ್ರತೀಕಾರ, ಪ್ರೀತಿಸಿ ನೊಡು, ಬಂಧನ, ಬದುಕು ಬಂಗಾರ, ಬಯಕೆಯ ಬಲೆಯಲ್ಲಿ, ಬಿನ್ನಹಕೆ ಬಾಯಿಲ್ಲ, ಬಿರುಕು, ಮಕ್ಕಳಿರಲವ್ವ ಮನೆ ತುಂಬ, ಮತ್ತೆ ಮಡಿಲಿಗೆ, ಮನೆಯೇ ಬೃಂದಾವನ, ಮರೆವು, ಮೊದಲು ಮಾನವನಾಗು, ಯೌವನದ ಹೊನಲಲ್ಲಿ, ಸಮರ್ಪಣೆ, ಸ್ಫೋಟ, ಹಕ್ಕಿ ಹಾರುತಿದೆ, ಹೂವನ್ನು ಮುಡಿಬೇಕು, ಹೊಂಬಿಸಿಲು, ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ಮತ್ತು ಹ್ಯಾಪಿ ಬರ್ತಡೇ ಎಂಬ ಕಾದಂಬರಿಗಳನ್ನು ರಚಿಸಿದ್ದಾರೆ. ಹೊಂಬಿಸಿಲು, ಪ್ರೀತಿಸಿ ನೋಡು, ಸಮರ್ಪಣೆ ಮತ್ತು ಬಂಧನ ಕಾದಂಬರಿಗಳು ಅದೇ ಹೆಸರಿನಲ್ಲಿ ಚಲನಚಿತ್ರಗಳಾಗಿ ಜನಪ್ರಿಯವಾಗಿವೆ. ಹಲವಾರು ಕಥೆ ಕಾದಂಬರಿಗಳು ತಮಿಳು, ಮಲೆಯಾಳಂ, ತೆಲುಗು, ಪಂಜಾಬಿ ಭಾಷೆಗೂ ಭಾಷಾಂತರವಾಗಿವೆ.

1975ರಲ್ಲಿ ರಾಯಚೂರಿನ ಕನ್ನಡ ಸಂಘದಿಂದ ಅತ್ಯುತ್ತಮ ಕನ್ನಡ ಲೇಖಕಿ ಪ್ರಶಸ್ತಿ, 1982–83ರಲ್ಲಿ ಕರ್ನಾಟಕ ಸರ್ಕಾರದಿಂದ ರಾಜ್ಯ ಪ್ರಶಸ್ತಿ. 1994 ಅಕ್ಟೋಬರ್ 23 ರಂದು ಬೆಂಗಳೂರಿನ ಅತ್ತಿಮಬ್ಬೆ ಪ್ರತಿಷ್ಠಾನದಿಂದ ಮನುಶ್ರೀ ರಾಷ್ಟ್ರೀಯ ಸಾಹಿತ್ಯ ಪ್ರಶಸ್ತಿ, 1995 ಸೆಪ್ಟಂಬರ್ 15 ರಂದು ಭಾರತರತ್ನ ಸರ್

ಎಂ. ವಿಶ್ವೇಶ್ವರಯ್ಯ ಇಂಜನಿಯರಿಂಗ್ ಪ್ರತಿಷ್ಠಾನದಿಂದ ಸರ್.ಎಂ.ವಿ. ನವರತ್ನ ಪ್ರಶಸ್ತಿ, ಅತ್ಯುತ್ತಮ ಶಿಕ್ಷಕಿ ಮುಂತಾದ ಪ್ರಶಸ್ತಿಗಳನ್ನು ಪಡೆದುಕೊಂಡಿದಾರೆ. ಸಂಗೀತ, ನೃತ್ಯ ಉಷಾ ನವರತ್ನ ರಾಮ್ ಅವರ ಆಸಕ್ತಿ ವಿಷಯಗಳಾಗಿದ್ದವು. ಅರವತ್ತು ತುಂಬುವ ಮೊದಲೇ ಬದುಕಿಗೆ ವಿದಾಯ ಹೇಳಿದ್ದು 2000 ಅಕ್ಟೋಬರ್ 1ರಂದು. ಇದರಿಂದಾಗಿ ಅವರ ಲೇಖನಿಯಿಂದ ಮತ್ತಷ್ಟು ಬರಹಗಳು ತಪ್ಪಿದಂತಾಗಿ ಅನೇಕ ಕಾದಂಬರಿ ಮತ್ತು ಅವರ ಸಾಹಿತ್ಯ ಪ್ರಿಯರಿಗೆ ನಿರಾಸೆಯುಂಟುಮಾಡಿದೆ.

**ಉಪಸಂಹಾರ**

ಒಟ್ಟಾರೆ ಗಂಡು ಮಕ್ಕಳು ಮಕ್ಕಳ ಸಾಹಿತ್ಯದಿಂದ ಪತ್ತೇದಾರಿ ಕಾದಂಬರಿಗಳತ್ತ ಹೊರಳಿದರೆ ಹೆಣ್ಣು ಮಕ್ಕಳು ಜನಪ್ರಿಯ ಸಾಮಾಜಿಕ ಕಾದಂಬರಿಗಳನ್ನು ಎದೆಗವಚಿಕೊಳ್ಳುತ್ತಿದ್ದರು. ಪಠ್ಯ ಪುಸ್ತಕಗಳ ನಡುವೆಯೂ ಈ ಕಾದಂಬರಿಗಳನ್ನು ಇಟ್ಟು ಓದುವ, ಅದರಲ್ಲೇ ತಮ್ಮೊಂದು ಪ್ರತ್ಯೇಕ ಭಾವಲೋಕವೊಂದನ್ನು ಕಟ್ಟಿಕೊಳ್ಳುತ್ತಿದ್ದರು ಆ ತರುಣ ತರುಣಿಯರು. ಜನಪ್ರಿಯ ಕಾದಂಬರಿಗಳು ಎಲ್ಲರನ್ನೂ ಪ್ರಭಾವಿಸಿದ್ದ ಬಗೆಯಾಗಿತ್ತು. ಅವರವರ ಅಭಿರುಚಿಗೆ ತಕ್ಕಂತಹ ಕಾದಂಬರಿಗಳನ್ನು ಸೃಜಿಸಿರುವ ಸಾಯಿಸುತೆ, ಹೆಚ್.ಜಿ.ರಾಧಾದೇವಿ ಮತ್ತು ಉಷಾ ನವರತ್ನರಾಮ್ ಕಾದಂಬರಿ ಬರಹಗಾರ್ತಿಯರಲ್ಲಿ ಕಾಣಬಹುದು. ಅಂತಹ ಕಾದಂಬರಿಗಳು ಓದುಗರಿಗೆ ಬಿಸಿ ಬಿಸಿ ಮಸಾಲೆ ದೋಸೆಯಷ್ಟೇ ರುಚಿಯೆನಿಸುತ್ತಿದ್ದವು, ಅಷ್ಟೇ ಬೇಗ ಖಾಲಿಯೂ ಆಗುತ್ತಿದ್ದವು. ಜನರ ಈ ಇಷ್ಟದ ಮುಂದುವರಿಕೆಯೋ ಎಂಬಂತೆ ಅಂತಹ ಕಾದಂಬರಿಗಳನ್ನು ಆಧರಿಸಿ ಸಿನಿಮಾಗಳನ್ನು ಮಾಡುತ್ತಿದ್ದುದು ಆಗಿನ ಟ್ರೆಂಡ್ ಆಗಿತ್ತು. ಆದರೆ, ಇಂದು ಹಾಗಲ್ಲ. ಇಂದು ಸಾಹಿತ್ಯಾಸಕ್ತಿ, ಸೃಜಿಸುವವರಲ್ಲಿ ಹಾಗೂ ಓದುಗರಲ್ಲಿ ಅಷ್ಟಾಗಿ ಕಂಡುಬರುವುದಿಲ್ಲ. ಕಾರಣ ಸಿನಿಮಾ, ಧಾರವಾಹಿಗಳು ಆಕರ್ಷಣೆಯ ಕೇಂದ್ರಗಳಾಗಿರುವ ಈ ಕಾಲದಲ್ಲಿ ವಾರಪತ್ರಿಕೆಗಳಲ್ಲಿ ಪ್ರಕಟವಾಗುವ ಧಾರವಾಹಿಗಳು, ಗ್ರಂಥಾಲಯದಲ್ಲಿ ದೊರಕುವ ಕಾದಂಬರಿಗಳು, ಪ್ರತಿಯೊಬ್ಬರ ಕೈಯಲ್ಲಿರುವ ಆಂಡ್ರೈಡ್ ಮೊಬೈಲ್‌ಗಳು ಓದುಗರಿಗೆ ಸರಕನ್ನು ನೀಡಲ್ಪಡುತ್ತಿರುವುದರಿಂದ ಕಾದಂಬರಿಗಳನ್ನು ಕೊಂಡೋದುವವರು ಕಡಿಮೆಯಾಗುತ್ತಿದ್ದಾರೆ ಎಂಬುದು ಪ್ರಕಾಶಕರ ನುಡಿ ಮಾತ್ರವಲ್ಲ, ಇದು ಸತ್ಯವೂ ಕೂಡ. ಹೀಗೆ ಕಾದಂಬರಿ ಕ್ಷೇತ್ರದಲ್ಲಿ ತಮ್ಮದೇ ಆದ ಓದುಗರನ್ನು ಹೊಂದಿರುವ ಈ ಮೂವರು ಲೇಖಕಿಯರ ಬರಹಗಳು ಅತ್ಯಂತ ಸೃಜನಾತ್ಮಕ ಹಾಗೂ ವಿಶಿಷ್ಟ ಶೈಲಿಯಲ್ಲಿ ರಚಿತವಾಗಿರುವುದನ್ನು ಗುರುತಿಸಬಹುದು.

**ಪರಾಮರ್ಶನ ಗ್ರಂಥಗಳು**


- ಸಾಯಿಸುತೆ. (2010). ಚಿರಬಾಂಧವ್ಯ. ಸುಧಾ ಎಂಟರ್‌ಪ್ರೈಸಸ್, ಬೆಂಗಳೂರು.
- ಸಾಯಿಸುತೆ. (2014). ವಸುದೈವ ಕುಟುಂಬ. ವಸಂತ ಪ್ರಕಾಶನ, ಬೆಂಗಳೂರು.
- ಸಾಯಿಸುತೆ. (2015). ಶ್ರೀರಸ್ತು ಶುಭಮಸ್ತು. ವಸಂತ ಪ್ರಕಾಶನ, ಬೆಂಗಳೂರು.
- ರಾಧಾದೇವಿ ಹೆಚ್.ಜಿ. (2009). ಬಾನಲ್ಲಿ ಪೂರ್ಣಚಂದ್ರ. ಕೀರ್ತಿ ಪ್ರಕಾಶನ, ಬೆಂಗಳೂರು.
- ರಾಧಾದೇವಿ ಹೆಚ್.ಜಿ. (2010). ರಥಾ ಕದಲಿತು. ಕೀರ್ತಿ ಪ್ರಕಾಶನ, ಬೆಂಗಳೂರು.

- ರಾಧಾದೇವಿ ಹೆಚ್.ಜಿ. (2010). ಸುಂದರ ಸುಮಧುರ, ಕೀರ್ತಿ ಪ್ರಕಾಶನ, ಬೆಂಗಳೂರು.
- ಉಷಾ ನವರತ್ನರಾಮ್. (1977). ಆಶ್ವಾಸನ. ರಾಜಲಕ್ಷ್ಮೀ ಪ್ರಕಾಶನ, ಬೆಂಗಳೂರು.
- ಉಷಾ ನವರತ್ನರಾಮ್. (1977). ಹರಿದ ಹೊನಲು. ರಾಜಲಕ್ಷ್ಮೀ ಪ್ರಕಾಶನ, ಬೆಂಗಳೂರು.
- ಉಷಾ ನವರತ್ನರಾಮ್. (1985). ಅಭಿನಯ. ವರ್ಧಮಾನ ಪ್ರಕಾಶನ, ಬೆಂಗಳೂರು.
- ಉಷಾ ನವರತ್ನರಾಮ್. (1986). ಬೆಳ್ಳಿತೆರೆ. ಪ್ರಕಾಶ ಸಾಹಿತ್ಯ ಪ್ರಕಾಶನ, ಬೆಂಗಳೂರು.


IIMRD
JOURNALS